ಸೀರೆ ಶೋ ರೂಂನಲ್ಲಿ ಒಂದು ಫಲಕ

'ಹತ್ತು ನಿಮಿಷದಲ್ಲಿ ಸೀರೆ ಆಯ್ಕೆ ಮಾಡಿ ಖರೀದಿಸಿದವರಿಗೆ ಶೇ 10% ರಿಯಾಯಿತಿ'

★★★

ರದ್ದಿ ಮಾರಾಟಗಾರ: ಸಾರ್ ನಾನು 500 ಮತ್ತು 1000 ರೂಪಾಯಿ ನೋಟುಗಳನ್ನು ತೆಗೆದು ಕೊಳ್ಳುತ್ತೇನೆ.

ಗುಂಡ: ಕಮೀಷನ್ ಎಷ್ಟು?

ರದ್ದಿ ಮಾರಾಟಗಾರ: ಕಮೀಷನ್ ಏನೂ ಇಲ್ಲ, ಕೆ.ಜಿ. ಗೆ 10 ರೂಪಾಯಿ.

★★★



ಸೇವಕ (ಅಳುತ್ತ): ಯಜಮಾನರೇ ಅಮ್ಮಾವ್ರು ನನ್ನ ಕೆನ್ನೆಗೆ ಜೋರಾಗಿ ಹೊಡೆದರು.

ಯಜಮಾನ: ಅದಕ್ಕೆ ಅಳುವುದು ಯಾಕೆ? ನಾನೆಂದಾದರೂ ಅಳುವುದನ್ನು ನೀನು ನೋಡಿರುವೆಯಾ?

★★★

ವೈದ್ಯ: ನಿಮಗೆ ಮಂಡೆ ಆಪರೇಷನ್ ಮಾಡೋಣಾಂತ ಅಂದ್ಕೊಂಡಿದ್ದೀನಿ.

ರೋಗಿ: ಏನು ಡಾಕ್ಟ್ರೇ ನಾನು ಹೊಟ್ಟೆ ನೋವ್ತೂಂತ ಬಂದ್ರೆ ಮಂಡೆ ಮಾಡ್ತೀನೀಂತ ಹೇಳ್ತಿದೀರಲ್ಲ?

★★★

ವೈದ್ಯ: ಈಗ ನಾನು ನಿಮಗೆ ಒಂದು ಗುಡ್ ನ್ಯೂಸ್ ಹಾಗೂ ಇನ್ನೊಂದು ಬ್ಯಾಡ್ ನ್ಯೂಸ್ ಹೇಳಲೇಬೇಕಾಗಿದೆ.

ಗುಂಡ: ಅದೇನ್ ಹೇಳಿ ಡಾಕ್ಟ್ರೇ ಪರವಾಗಿಲ್ಲ. ಆದರೆ ಮೊದಲು ಗುಡ್ ನ್ಯೂಸ್ ಹೇಳಿ.

ವೈದ್ಯ: ನೀವು ಇನ್ನು ಒಂದು ವರ್ಷ ಮಾತ್ರ ಬದುಕಿರ್ತೀರಾ.

ಗುಂಡ: ಬ್ಯಾಡ್ ನ್ಯೂಸ್?

ವೈದ್ಯ: ಇದನ್ನು ನಾನು ನಿಮಗೆ 10 ತಿಂಗಳ ಮೊದಲೇ ಹೇಳಬೇಕಾಗಿತ್ತು.

★★★

ಸಂದರ್ಶಕ: ಯಾಕ್ರೀ ತುಂಬಾ ಸುಸ್ತಾಗಿದೀರಾ?

ಅಭ್ಯರ್ಥಿ: ವಾಕ್ ಇನ್ ಇಂಟರ್ ವ್ಯೂ ಅಂತ ಇತ್ತಲ್ಲ, ಅದಕ್ಕೆ ಊರಿನಿಂದ ನಡೆದುಕೊಂಡು ಬಂದೆ.

★★★

ವೈದ್ಯ ರೋಗಿಯ ಹಿಂದೆ ಓಡುತ್ತಿದ್ದ. ಗುಂಡ, ಯಾಕೆ ಡಾಕ್ಟ್ರೇ ರೋಗಿಯ ಹಿಂದೆ ಓಡ್ತಾ ಇದೀರಾ?

ವೈದ್ಯ: ನಾಲ್ಕು ಸಲ ಆಯ್ತು. ಮೆದುಳಿನ ಆಪರೇಶನ್ ಅಂತ ಬಂದು ಹೇರ್ ಕಟ್ ಮಾಡಿಸಿದ ತಕ್ಷಣವೇ ಓಡಿ ಹೋಗ್ತಾನೆ.

★★★

ನಾಣಿ: ಯಾಕಯ್ಯಾ ಚಾಕೂನ ಬಿಸಿ ಮಾಡ್ತಾ ಇದೀಯಾ?

ಗುಂಡ: ಆತ್ಮಹತ್ಯೆ ಮಾಡಿ ಕೊಳ್ಳೋಕೆ.

ನಾಣಿ: ಅದಕ್ಕೆ ಚಾಕು ಯಾಕೆ ಬಿಸಿ ಮಾಡ್ಬೇಕು?

ಗುಂಡ: ಇನ್‌ಫೆಕ್ಷನ್ ಆಗದಿರಲಿ ಅಂತ.

★★★

ನರ್ಸ್: ಡಾಕ್ಟರ್! ಡಾಕ್ಟರ್! ಆಪರೇಷನ್ ಥಿಯೇಟರ್‌ನಿಂದ ಪೇಷಂಟ್ ಓಡಿ ಹೋಗ್ತಾ ಇದಾನೆ.

ವೈದ್ಯ: ಹೋಗಲಿ ಬಿಡು! ಬದುಕಿಕೊಳ್ಳಲಿ.

**(ಸಂಗ್ರಹ) ಎಂ.ಕೆ.ಮಂಜುನಾಥ್**

**ಇಂಟರ್‌ವ್ಯೂ**

ಇಂಟರ್‌ವ್ಯೂ ಗೆ ಸಾಲು ಸಾಲು ಅಭ್ಯರ್ಥಿಗಳು ಬಂದಿದ್ದರು. ಇಂಟರ್‌ವ್ಯೂ ಕೋಣೆಯ ಬಾಗಿಲ ಬಳಿ ಸ್ಟೂಲಿನ ಮೇಲೆ ಕುಳಿತಿದ್ದ ಜವಾನ ಎದುರುಗಡೆ ಕುಳಿತ ಸಂದರ್ಶನಾಕಾಂಕ್ಷಿ ಬಳಿ ಮಾತಿಗಿಳಿದ.

ಏನು ನಿನ್ನ ಹೆಸರು?

ಗುಂಡ್ಯಾ.

ಏನು ಓದಿದ್ದಿ?

ಡಬ್ಬಲ್ ಗ್ರ್ಯಾಜುಯೇಟ್ ಇದ್ದೇನೆ.

ಓಹ್ .. ಹೌದಾ ? ಪರವಾಗಿಲ್ಲ .. ನನ್ನಷ್ಟೇ ಓದಿದ್ದೀ ಬಿಡು ! ಆದರೆ ಒಳಗಡೆ ಸಂದರ್ಶನದಲ್ಲಿ ಹಿಂದೆ ನಾನು ಹೇಳಿದ ಹಾಗೆ 'ಯಾವ ಕೆಲಸ ಕೊಟ್ರೂ ಮಾಡ್ತೀನಿ ' ಅಂತ ಮಾತ್ರ ಹೇಳ್ಬೇಡಾ!

★★★

**ಸೆಮಿನಾರ್**

ಸೆಮಿನಾರ್ ನಡೆವ ಸ್ಥಳಕ್ಕೆ ಗುಂಡ್ಯಾ ಬೇಗ ಬೇಗ ಹೆಜ್ಜೆ ಹಾಕಿದ. ಮುಖ್ಯ ಅತಿಥಿ ಅವನೇ ಆದ್ದರಿಂದ ಸ್ವಾಗತಿಸಲು ಸಂಘಟಕರು ದ್ವಾರದಲ್ಲೇ ಹಾರ ಹಿಡಿದು ನಿಂತಿದ್ದರು. ಇವನು ಹೋದಾಕ್ಷಣ ಹೂಮಾಲೆ ಹಾಕಿ ಸ್ವಾಗತಿಸಿದರು. 'ನಾನು ಮತ್ತು ಸಮಾಜ ಎಂಬ ವಿಷಯದ ಮೇಲೆ ವಿಚಾರ ಮಂಡಿಸಲು ಬಂದ ತಮಗೆ ಸ್ವಾಗತ' ಅಂದರು.

ಗುಂಡ್ಯಾ ಹೌಹಾರಿದ! "ಅದು ಹೇಗ್ರೀ ಸಾಧ್ಯ? ನೀವು ನನಗೆ ಕೊಟ್ಟ ವಿಷಯ 'ಸಮಾಜ ಮತ್ತು ನಾನು' ಎಂದು. ಅದಕ್ಕೇ ತಯಾರಾಗಿ ನಾನು ಬಂದಿದ್ದೇನೆ. ಈಗ ಅದು ಬಿಟ್ಟು ಒಮ್ಮೆಲೇ 'ನಾನು ಮತ್ತು ಸಮಾಜ' ಎಂಬ ವಿಷಯದ ಕುರಿತು ಮಾತನಾಡು ಅಂದರೆ ಹೇಗೆ? ಸಾಧ್ಯವಿಲ್ಲ" ಎಂದು ಸಂಘಟಕರನ್ನು ತರಾಟೆಗೆ ತೆಗೆದುಕೊಂಡ!

'ಪರವಾಗಿಲ್ಲ, ಅದೇ ವಿಷಯವನ್ನು ಹಿಂದೆ ಮುಂದೆ ಮಾಡಿ ಮಾತಾಡಿ ಸಾರ್. ಮೊದಲು ಮಾತನಾಡಬೇಕಿದ್ದುದನ್ನು ನಂತರ ಮಾತಾಡಿ, ನಂತರದ್ದನ್ನು ಮೊದಲು ಮಾತಾಡಿ' ಎಂದ ಸಂಘಟಕ! ಗುಂಡ್ಯಾ ಫುಲ್ ಖುಷ್!

**(ಸಂಗ್ರಹ) ರವಿರಾಜ ಹಾಲಂಬಿ**